


# ಅನನ್ಯ ಸಾಹಸ ಯಾನ

**ಸಮುದ್ರದ ಬಗ್ಗೆ ಅದಮ್ಯ ಸೆಳೆತ ಹೊಂದಿದ್ದ ಅನನ್ಯ ಪ್ರಸಾದ್ ಅವರಿಗೆ ಸಾಗರದ ಅಂತರಾಳವನ್ನು ಅರಿಯಲು ಒಂದು ಅವಕಾಶವಾಗಿ ಒದಗಿಬಂದದ್ದು ರೋಯಿಂಗ್ ಸ್ಪರ್ಧೆ. 52 ದಿನಗಳ ಕಾಲ ಒಂಟಿಯಾಗಿ 4,828 ಕಿ.ಮೀ. ಕ್ರಮಿಸುವ ಮೂಲಕ ಸಾಹಸಯಾನವನ್ನು ಯಶಸ್ವಿಯಾಗಿ ಪೂರೈಸಿದ್ದಾರೆ.**

■ **ಮಂಜುಶ್ರೀ ಎಂ. ಕಡಕೋಳ**

ಆಕಾಶವೇ ಸೂರು, ಸುತ್ತಲೂ ನೀರು. ಮಹಾಸಾಗರದಲ್ಲಿ ನಡುವಿನ ದೋಣಿಯೇ ಮನೆ. ಹಗಲು–ರಾತ್ರಿ ಸಾಗರ ಬಿಟ್ಟರೆ ಏನಿಲ್ಲ, ನೋವು–ನಲಿವು ಎರಡಕ್ಕೂ ಸಾಗರವೇ ಎಲ್ಲ.

ಇಂಥದ್ದೊಂದು ಸ್ಥಿತಿಯಲ್ಲಿ ಬರೋಬ್ಬರಿ 52 ದಿನಗಳ ಕಾಲ ಒಂಟಿಯಾಗಿ ಅಟ್ಲಾಂಟಿಕ್ ಮಹಾಸಾಗರವನ್ನು ಯಶಸ್ವಿಯಾಗಿ ದಾಟಿ ಬಂದಿದ್ದಾರೆ ಕನ್ನಡತಿ ಅನನ್ಯ ಪ್ರಸಾದ್. ರೋಯಿಂಗ್ ಬೋಟ್‌ನಲ್ಲಿ ಹುಟ್ಟು ಹಾಕುತ್ತಾ ಅನನ್ಯ ದಾಟಿದ್ದು ಬರೋಬ್ಬರಿ 4,828 ಕಿ.ಮೀ.!

ಅಟ್ಲಾಂಟಿಕ್ ಮಹಾಸಾಗರದಲ್ಲಿ ‘ಸೋಲೊ ರೋಯಿಂಗ್’ (ಏಕಾಂಗಿಯಾಗಿ ಹುಟ್ಟು ಹಾಕುತ್ತಾ ದೋಣಿ ನಡೆಸುವುದು) ಸ್ಪರ್ಧೆಯಲ್ಲಿ ಯಶಸ್ವಿಯಾಗಿ ಯಾನ ಮುಗಿಸಿದ ಮೊದಲ ವರ್ಣೀಯ ಮಹಿಳೆ ಎಂಬ ದಾಖಲೆಗೂ ಅನನ್ಯ ಪಾತ್ರರಾಗಿದ್ದಾರೆ.

ಅನನ್ಯ ಪ್ರಸಾದ್. ಡಾ. ಜಿ.ಎಸ್. ಶಿವಪ್ರಸಾದ್ ಮತ್ತು ಡಾ. ಪೂರ್ಣಿಮಾ ಪ್ರಸಾದ್ ಅವರ ಏಕೈಕ ಪುತ್ರಿ. ಅಂದರೆ, ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಅವರ ಮೊಮ್ಮಗಳು. ಕಾಣದ ಕಡಲಿಗೆ ಹಂಬಲಿಸಿ, ಅದರೊಳಗೆ ಸೇರಿ ನೀಲಿಯಾಗುವ ಕನಸು ಕಂಡಿದ್ದ

**ಅಟ್ಲಾಂಟಿಕ್ ಮಹಾಸಾಗರ ದಾಟಿದ ಹೆಮ್ಮೆಯ ಕನ್ನಡತಿ**

ಅಜ್ಜ ಶಿವರುದ್ರಪ್ಪನವರ ಕನಸನ್ನು ರೋಯಿಂಗ್ ಮೂಲಕ ನನಸು ಮಾಡಿದ್ದಾರೆ ಮೊಮ್ಮಗಳು.

ಹುಟ್ಟಿದ್ದು ಬೆಂಗಳೂರಾದರೂ ಅನನ್ಯ ಬೆಳೆದು, ಓದಿ, ನೆಲೆಸಿರುವುದು ಇಂಗ್ಲೆಂಡ್‌ನಲ್ಲಿ. ವೈದ್ಯರಾಗಿದ್ದ ಅಪ್ಪ–ಅಮ್ಮ ವೃತ್ತಿಯ ಕಾರಣ ಅಲ್ಲಿಯೇ ನೆಲೆಸಿದ್ದಾರೆ. ಬಾಲ್ಯದಿಂದಲೇ ಅನನ್ಯ ಅವರಿಗೆ ಹೈಕಿಂಗ್, ಟ್ರೆಕ್ಕಿಂಗ್, ಕಯಾಕಿಂಗ್‌ನಂಥ ಚಟುವಟಿಕೆಗಳೆಂದರೆ ಬಲು ಪ್ರೀತಿ. 15–16 ವರ್ಷ ತುಂಬುವ ಹೊತ್ತಿಗೆ ಓದಿನ ಜೊತೆ ಕ್ರೀಡೆಗಳತ್ತಲೂ ಕಣ್ಣಿಟ್ಟರು. ಕುಟುಂಬದಲ್ಲಿ ಯಾರಿಗೂ ಕ್ರೀಡಾ ಹಿನ್ನೆಲೆಯಿರದಿದ್ದರೂ ಇವರಲ್ಲಿ ಪರ್ವತಗಳನ್ನು ಏರುವ, ಸಾಹಸ ಕ್ರೀಡೆಗಳನ್ನು ಕೈಗೊಳ್ಳುವ ಆಸೆ. ಅದಕ್ಕೆ ತಕ್ಕಂತೆ ಇಂಗ್ಲೆಂಡ್‌ನ ಡ್ಯೂಕ್ ಆಫ್ ಎಡಿನ್‌ಬರೊ ಇಂಟರ್‌ನ್ಯಾಷನಲ್ ಅವಾರ್ಡ್ ಕಾರ್ಯಕ್ರಮದಲ್ಲಿ ಭಾಗವಹಿಸುವ ಅವಕಾಶವೂ ಅವರಿಗೆ ದಕ್ಕಿತು.

### ಸಾಗರವೆಂಬ ಮೋಹನ ಮುರಳಿ

ಟ್ರೆಕ್ಕಿಂಗ್, ಕಯಾಕಿಂಗ್ ಮಾಡಿ ಅನುಭವ ಪಡೆದಿದ್ದ ಅನನ್ಯ ಅವರಿಗೆ ಸಮುದ್ರದಲ್ಲಿ ಮಾಡಬಹುದಾದ ಕ್ರೀಡಾ ಚಟುವಟಿಕೆಗಳತ್ತ ಅದಮ್ಯ ಸೆಳೆತ. ಅದಕ್ಕೆ ಇಂಬಾಗಿ ಒದಗಿಬಂದಿದ್ದು ವರ್ಲ್ಡ್ಸ್ ಟಫೆಸ್ಟ್ ರೋ ಸ್ಪರ್ಧೆ. 2018ರಲ್ಲಿ ಟಿ.ವಿ. ಶೋವೊಂದರಲ್ಲಿ ಈ ಸ್ಪರ್ಧೆ ನೋಡಿ ಬೆರಗಾಗಿದ್ದ ಅನನ್ಯ ತಾನೂ ಇಂಥ ಸಾಹಸ ಕೈಗೊಳ್ಳಬೇಕೆಂದು ತೀರ್ಮಾನಿಸಿದ್ದರು. ಅದರಲ್ಲೂ ರೋಯಿಂಗ್ ಸ್ಪರ್ಧೆಗಳಲ್ಲಿ ಪುರುಷರದ್ದೇ ಪಾರುಪತ್ಯ ಎನ್ನುವ ಮಿಥ್ಯೆಯನ್ನು ಹೊಡೆದೋಡಿಸುವ ಹಂಬಲ ಹುಟ್ಟಿಕೊಂಡಿತ್ತು. ರೋಯಿಂಗ್ ಸ್ಪರ್ಧೆಯ ಆಳ–ಅಗಲಗಳನ್ನು ಕಂಡುಕೊಂಡ ಅವರು 2021ರಲ್ಲಿ